ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.

| ಒ.ಎಸ್. ನಂ :- | 246/2008 |
|---|---|
| ಡಿ.ಡಬ್ಲ್ಯೂ | 1 |
| **ದಿನಾಂಕ :-** | 16.02.2026 |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿಯ ಪರ ವಕೀಲರಾದ ಶ್ರೀ.ವಿ.ಪಿ. ಎಸ್. ರವರ ಪರ ಶ್ರೀ.ಜೆ.ಎನ್. ವಕೀಲರಿಂದ

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ದೊಡ್ಡಮುನಿಯಪ್ಪ ಎಂಬುವವರು ವಾದಿಯ ತಂದೆ ಎಂದರೆ ಸರಿ. ದೊಡ್ಡಮುನಿಯಪ್ಪನವರ ತಂದೆ ಕರಗಪ್ಪ. ಕರಗಪ್ಪ ನವರಿಗೆ ಮೂರು ಜನ ಮಕ್ಕಳು. ಅವರ ಮಕ್ಕಳೆಂದರೆ ದೊಡ್ಡಮುನಿಯಪ್ಪ, ಚಿಕ್ಕಮುನಿಯಪ್ಪ ಮತ್ತು ಮುರುಳಿಕಾಂತ್. ಮುರುಳಿಕಾಂತ್ ರವರನ್ನು ಮುನಿಕರಗಪ್ಪ ಎಂದು ಸಹ ಕರೆಯುತ್ತಾರೆ ಎಂದರೆ ಇರಬಹುದು.

ದಾವಾ ಆಸ್ತಿಯನ್ನು ದೊಡ್ಡಮುನಿಯಪ್ಪ ಎಂಬುವವರು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದಲ್ಲಿದ್ದಾಗ ಖರೀದಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಒಟ್ಟು ಕುಟುಂಬದಲ್ಲಿ ಖರೀದಿ ಮಾಡಿದ್ದಾರೆ ಎಂದು ತೋರಿಸಲು ದಾಖಲೆ ಕೊಟ್ಟಿರುತ್ತೇನೆ. ದಾವಾ ಆಸ್ತಿ ದೊಡ್ಡಮುನಿಯಪ್ಪನವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಅವರ ಹೆಸರಿನಲ್ಲಿ ಖಾತೆ ಇತ್ತು ಎಂದರೆ ಸಾಕ್ಷಿ ವಿಭಾಗದ ನಂತರ ಖಾತೆ ಅವರವರ ಹೆಸರಿಗೆ ಆಗಿರುತ್ತದೆ ಎಂದು ನುಡಿದಿರುತ್ತಾರೆ. ನಿಪಿ-3 ರಂತೆ ಕಂದಾಯ ರಸೀದಿ ವಾದಿಯ ತಂದೆಯ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಖರೀದಿ ಮಾಡುವಾಗ ಖಾಲಿ ಜಾಗ ಇತ್ತು ಎಂದರೆ ಸರಿ. ದಾವಾ ಆಸ್ತಿ ಖರೀದಿ ಮಾಡಿದ ನಂತರ ಒಂದು ಕಡೆ ಮನೆ ಕಟ್ಟಿದ್ದಾರೆ, ಇನ್ನೊಂದು ಕಡೆ ಖಾಲಿ ಜಾಗ ಇದೆ ಎಂದರೆ ಸರಿ. ಸದರಿ ಮನೆಯಲ್ಲಿ ವಾದಿ ವಾಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಅವರಿಗೆ ಬಂದ ಭಾಗದಲ್ಲಿ ಅವರು ವಾಸ ಮಾಡುತ್ತಿದ್ದಾರೆ ಎಂದು ನುಡಿದಿರುತ್ತಾರೆ.

ನಾನು 2008 ರಲ್ಲಿ ನಾಗೇಶ್ ರವರಿಂದ ದಾವಾ ಆಸ್ತಿಯ ಎರಡನೇ ಒಂದು ಭಾಗವನ್ನು ಖರೀದಿ ಮಾಡಿರುತ್ತಾನೆ.

(ಮುಂದುವೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾಯಿಕ.ದಂಡಾಧಿಕಾರಿಗಳು, ಆನೇಕಲ್.